INDIAN JOURNAL OF HISTORY AND ARCHAEOLOGY
ISSN (e):2582-225X
Vol-3, Issue -6, March-April, 2022,
PageNo,49-58
Peer Reviewed Journal, Referred Journal

# ಹಾಸನ ಜಿಲ್ಲೆಯ ಶಾಸನಗಳಲ್ಲಿ ವೈಷ್ಣವ ಪಂಥದ ಪ್ರತಿಪಾದನೆ ಒಂದು ವಿಶ್ಲೇಷಣೆ

ರಾಜೇಶ ಖನ್ನಾ[1]

ಜಗತ್ತಿನಲ್ಲಿ ಯಾವುದೇ ಒಂದು ಮಹತ್ವದ ಚರಿತ್ರೆಯನ್ನು ಬಹುಮುಖ್ಯವಾಗಿ ತಿಳಿಸಲು ಮತ್ತು ಅರಿಯಲು ಹಲವು ಹತ್ತು ಸಾಕ್ಷ್ಯಾಧಾರಗಳು ಅಗತ್ಯವಾಗಿರುತ್ತವೆ. ಅಂತಹವುಗಳಲ್ಲಿ ಶಿಲಾ ಶಾಸನಗಳ ಆಧಾರಗಳು ಅತ್ಯಂತ ಪ್ರಮುಖವಾಗಿರುತ್ತವೆ. ಆದ್ದರಿಂದಲೇ ಪ್ರಸುತ್ತ ಅಧ್ಯಯನದಲ್ಲಿಯೂ ಕೂಡ ವೈಷ್ಣವ ಪಂಥದ ಚರಿತ್ರೆಯನ್ನು ತಿಳಿಯಲು ಮತ್ತು ಅದರ ಬಗೆಗೆ ಅಧ್ಯಯನ ಮಾಡಲು ಇವುಗಳು ಹೆಚ್ಚು ಉಪಯುಕ್ತವೇ ಆಗಿರುವಂತಹ ಆಧಾರವೇ ಆಗಿರುತ್ತದೆ ಎಂದು ಗುರುತಿಸಬಹುದು. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಶಾಸನಗಳು ಎಂದರೆ; ಬಹುಕಾಲದಿಂದಲೂ ಉಳಿದುಕೊಂಡು ಬಂದಿರುವಂತಹ ಶಿಲೆ ಮತ್ತು ಲೋಹಗಳು. ಇವುಗಳ  ಮೇಲಿನ ಬರಹವೇ ಶಾಸನ ಆಗಿರುತ್ತದೆ. ಈ ಹಿನ್ನೆಲೆಯಲ್ಲಿ ತಳಸ್ಪರ್ಶಿಯಾಗಿ ಅರ್ಥೈಸಿದಾಗ; ಶಾಸನವು ಮೂಲತಃ ದಾನಕ್ಕೆ ಸಂಬಂಧವಾದ ರಾಜಾಜ್ಞೆಯೇ ಆಗಿದೆ. ಒಟ್ಟಿನಲ್ಲಿ ಶಾಸನವೆಂದರೆ, ಗಟ್ಟಿಯಾದ ಅಥವಾ ಶಾಶ್ವತವಾದಂತಹ ಯಾವುದೇ ಬಗೆಯ ದಾಖಲೆಗಳು ಈ ಶಾಸನಗಳೇ ಪ್ರಸ್ತುತ ಅಧ್ಯಯನದ ಹಾಸನ ಜಿಲ್ಲೆಯಲ್ಲಿನ ವೈಷ್ಣವ ಪಂಥದ ಐತಿಹಾಸಿಕ ಪರಂಪರೆಯ ರಚನೆಗೆ ಒದಗಿಸುವ ಬಹುಮುಖ್ಯ ಮಾಹಿತಿಯ ಕೋಶವೇ ಆಗಿದೆ. ಈ  ಶಾಸನಗಳು ವಾಸ್ತವ ವಿಷಯಗಳ ದಾಖಲೆಗಳೇ ಆಗಿರುವುದರಿಂದ ಅವುಗಳಲ್ಲಿ ದೊರಕುವಂತಹ ವಿಷಯ ಸಂಪತ್ತು ಆಗಾಧವಾದದ್ದೇ ಆಗಿತ್ತು. ಲೋಹ ಶಿಲೆ ಹಾಗೂ ಮಣ್ಣು ಶಾಸನಗಳ ಸಾಮಾಗ್ರಿಗಳಾಗಿವೆ. ಹಾಗೆಯೇ ಸಿಂಧೂಲಿಪಿ, ಬ್ರಾಹ್ಮೀಲಿಪಿ, ಖರೋಷ್ಠಿಲಿಪಿ ಹಾಗೂ ದೇವನಾಗರಿ ಲಿಪಿಗಳೇ ಆಗಿವೆ. ದಾನಶಾಸನ, ಪ್ರಶಸ್ತಿ ಶಾಸನ, ವೀರಗಲ್ಲು, ಮಾಸ್ತಿಗಲ್ಲು, ನಿಷಿಧಿಗಲ್ಲು, ಯುವಶಾಸನ ಹಾಗೂ ಕೂಟ ಶಾಸನಗಳಾಗಿವೆ.

ಪ್ರಸ್ತುತ ವಿಶ್ಲೇಷಣೆಗೆ ಒಳಪಡಿಸಿರುವಂತಹ ಹಾಸನ ಜಿಲ್ಲೆಯ ಮಹಾವಿಷ್ಣುವಿನ ಪರಮಾಪ್ತ ಆರಾಧಕರಾಗಿರುವಂತಹ ವೈಷ್ಣವ ಪಂಥಕ್ಕೆ ಸಂಬಂಧಿಸಿದಂತೆಯೇ ತಳಸ್ಪರ್ಶಿಯಾಗಿ ಗ್ರಹಿಸುವುದಾದರೆ; ಶ್ರವಣಬೆಳಗೊಳದ ಪ್ರಾಚೀನ ಶಾಸನಗಳು ಹಾಗೂ ಬೇಲೂರು ಶಾಸನಗಳು ಹೆಚ್ಚು ಪ್ರಸಿದ್ಧವಾಗಿರುತ್ತವೆ ಎಂದು ಹೇಳಬಹುದು. ಶಾಸನಗಳು ಚಾರಿತ್ರಿಕ ದೃಷ್ಟಿಕೋನದ ಜೊತೆಗೆಯೇ ಧಾರ್ಮಿಕ, ಸಾಮಾಜಿಕ ಹಾಗೂ ಸಾಹಿತ್ಯಕ ದೃಷ್ಟಿಯಿಂದಲೂ ಹೆಚ್ಚು ಪ್ರಾಮುಖ್ಯತೆಯಿಂದಲೇ ಕೂಡಿರುತ್ತವೆ. ಹಾಗೆಯೇ

[1].ಸಂಶೋಧನಾ ವಿದ್ಯಾರ್ಥಿ,ಪ್ರಾಚೀನ ಇತಿಹಾಸ ಮತ್ತು ಪುರಾತತ್ವ ಅಧ್ಯಯನ ವಿಭಾಗ,ಕನ್ನಡ ವಿಶ್ವವಿದ್ಯಾಲಯ,ಹಂಪಿ.

ಶಾಸನದ ಕವಿಗಳು, ಲಿಪಿಕಾರರು ಹಾಗೂ ರೂವಾರಿಗಳು ಸಿದ್ಧತೆ ಮತ್ತು ಸಂರಕ್ಷಣೆಯನ್ನು ಮಾಡುತ್ತಲೇ ಬಂದಿರುವುದನ್ನು ಇಂದಿಗೂ ಕೂಡ ಗುರುತಿಸಬಹುದು.

ಯಾವುದೇ ಒಂದು ಚಾರಿತ್ರಿಕ ಅಧ್ಯಯನದಲ್ಲಿ ಶಾಸನಗಳು ಪ್ರಾಥಮಿಕ ಮೂಲ ಆಧಾರ ಆಕರಗಳಾಗಿರುತ್ತವೆ ಎಂದು ಹೇಳಬಹುದು. ಆದರೂ ಪ್ರಸ್ತುತ ಅಧ್ಯಯನದಲ್ಲಿ ಶಾಸನ ಆಧಾರಗಳು ಹೆಚ್ಚು ಪ್ರಾಧಾನ್ಯತೆಯ ಸ್ಥಾನದಲ್ಲಿಯೇ ಇರುತ್ತವೆ ಎಂಬುದು ಕಂಡುಬರುತ್ತದೆ. ಈ ನೆಲೆ ಮತ್ತು ಹಿನ್ನೆಲೆಯಲ್ಲಿ ಕರ್ನಾಟಕ ರಾಜ್ಯದಲ್ಲಿರುವ ಜಿಲ್ಲೆಗಳಲ್ಲಿ ಹಾಸನವೂ ಕೂಡ ಒಂದು ಪ್ರಮುಖ ಜಿಲ್ಲೆಯೇ ಆಗಿದೆ. ಈ ಜಿಲ್ಲೆಯಲ್ಲಿನ ವೈಷ್ಣವ ಪಂಥದವರನ್ನು ಕುರಿತು ಅಧ್ಯಯನ ಮಾಡುವಾಗ ಮತ್ತು ಇಲ್ಲಿನ ಚರಿತ್ರೆಯ ರಚನೆಯಲ್ಲಿ ಶಾಸನಗಳು ಅತ್ಯಂತ ಅಮೂಲ್ಯ ಹಾಗೂ ಅಗತ್ಯವಾಗಿರುವಂತಹ ಆಕರಗಳೇ ಆಗಿರುತ್ತವೆ ಎಂಬುದನ್ನು ತಳಸ್ಪರ್ಶಿಯಾಗಿ ಗುರುತಿಸಿ ದಾಖಲಿಸಲಾಗಿರುತ್ತದೆ. ಆದ್ದರಿಂದಲೇ, ಯಾವುದೇ ಒಂದು ಸ್ಥಳ, ಪ್ರದೇಶ, ಭಾಷೆ, ಸಾಹಿತ್ಯ, ಜನವರ್ಗಗಳ ಸಂಸ್ಕೃತಿಯನ್ನು ಅಧ್ಯಯನಕ್ಕೆ ಒಳಪಡಿಸಿದಾಗ; ಅಲ್ಲಿ ಶಾಸನಗಳು ಅಮೂಲ್ಯವೇ ಆಗಿರುತ್ತವೆ. ಹಾಗಾಗಿಯೇ ಶಾಸನಗಳು ಒಂದು ಜನಾಂಗದ ಆಸ್ತಿ, ಸುದೈವದಿಂದ ಕೂಡಿದಂತಹ ನವ್ಯ ಕನ್ನಡ ನಾಡಿನಲ್ಲಿ ಶಾಸನಗಳು ಹೇರಳವಾಗಿ ಸಿಗುವಂತಹ ಸಂಪತ್ತಾಗಿರುತ್ತದೆ. ಮತ್ತೇ ಪಕ್ಕದಲ್ಲಿನ ತಮಿಳುನಾಡು ರಾಜ್ಯವನ್ನು ಹೊರತುಪಡಿಸಿದರೆ, ಕನ್ನಡದಲ್ಲಿಯೇ ಅತೀ ಹೆಚ್ಚಿನ ಸಂಖ್ಯೆಯಲ್ಲಿ ಶಾಸನಗಳು ದೊರಕಿರುತ್ತವೆ ಎಂಬುದನ್ನು ಪುರಾತತ್ವ ಇಲಾಖೆಯವರು ಮತ್ತು ಪುರಾತತ್ತ್ವದ ತಜ್ಞರು ಅಂದಾಜಿಸಿದ್ದಾರೆ ಎಂದು ಹೇಳಬಹುದು.

ಸರ್ವೇಸಾಮಾನ್ಯವಾಗಿ ಶಾಸನಗಳು ಶಿಲಾಪಟ್ಟಿಕೆಗಳಲ್ಲಿ ತಾಮ್ರದ ಫಲಕಗಳಲ್ಲಿ, ಹುಟ್ಟು ಬಂಡೆಗಳ ಮೇಲೆ ನೆಟ್ಟುಕಲ್ಲುಗಳ ಮೇಲೆ ವಸ್ತು ವಾಹನಗಳ ಮೇಲೆ ಆಯುಧಗಳ ಮೇಲೆ ವಿಗ್ರಹಗಳ ಪಾದಪೀಠಗಳಲ್ಲಿ, ಮೂರ್ತಿಯ ಹಿಂಭಾಗದಲ್ಲಿ, ದೇವದೇವೋಪಾಸಕರಣ ದ್ರವ್ಯಗಳಲ್ಲಿ ಕೆತ್ತಲ್ಪಟ್ಟಿರುತ್ತವೆ ಎಂಬುದನ್ನು ಗುರುತಿಸಲಾಗಿದೆ. ಇಂತಹವುಗಳಲ್ಲಿ ಪ್ರಸ್ತುತ ಅಧ್ಯಯನದ ಪರಿಮಿತಿಯಲ್ಲಿ ಸಂಗ್ರಹಿಸಿ, ಹಾಸನ ಜಿಲ್ಲೆಯ ವೈಷ್ಣವ ಪಂಥದವರ ಬಗೆಗೆ ದಾಖಲಿಸಲು ಸಾಧ್ಯವಾಗಿರುತ್ತದೆ. ದೇಶ ಹಾಗೂ ಕರ್ನಾಟಕ ರಾಜ್ಯದಲ್ಲಿನ ವಿವಿಧ ಪ್ರದೇಶಗಳು ಹಾಗೂ ಸ್ಥಳಗಳಲ್ಲಿ ದೊರಕಿರುವ, ಗುರುತಿಸಿರುವ ಶಾಸನಗಳನ್ನು ಅಧ್ಯಯನ ಮಾಡಿದಾಗ, ಆ ಎಲ್ಲಾ ಶಾಸನಗಳಲ್ಲಿ ಕಂಡುಬರುವಂತಹ ಪ್ರಧಾನವಾದ ಅಂಶಗಳೆಂದರೆ, ಆ ಶಾಸನವು ಯಾರಿಂದ ಎಷ್ಟರಲ್ಲಿ ರಚಿತವಾಗಿರುತ್ತದೆ ಮತ್ತು ಯಾವ ಲಿಪಿಗೆ ಸಂಬಂಧಿಸಿದೆ, ಯಾವ ಧರ್ಮ–ಪಂಥವನ್ನು ಪ್ರತಿಬಿಂಬಿಸುತ್ತದೆ ಎಂಬುದು ಪ್ರಮುಖವಾಗಿ ದಾಖಲೀಕರಣಗೊಂಡಿರುತ್ತದೆ. ಯಾರು, ಯಾವಾಗ, ಏತಕ್ಕಾಗಿ ದಾನ ಮಾಡಿದರು, ಯಾವ ರಾಜ ವಂಶದವರು, ಯಾರು ಅದಕ್ಕೆ ಅನುಮತಿಸಿದ್ದರು. ಅಲ್ಲಿ ರಾಜನೋ, ಮಂತ್ರಿಯೋ, ಸೇನಾಧಿಪತಿಯೋ, ದಾನ ನೀಡಿ, ಪಡೆದ ವಸ್ತು ಏನು, ಯಾವುದರ ಜೀರ್ಣೋದ್ಧಾರಕ್ಕಾಗಿ ಸ್ಥಾಪಿತಗೊಂಡಿತ್ತು ಮತ್ತು

ರಚಿಸಲಾಗಿದೆ ಎಂಬಂಥ ಅನೇಕ ಅಂಶಗಳು ಲಿಪಿ ರೂಪದಲ್ಲಿ ದಾಖಲೀಕರಿಸಲಾಗಿರುತ್ತದೆ ಎಂಬುದನ್ನು ಅಧ್ಯಯನದ ಮೂಲಕ ಗುರುತಿಸಲಾಗಿದೆ.

ಹಾಸನ ಜಿಲ್ಲೆಯಲ್ಲಿ ಪತ್ತೆ ಹಚ್ಚಲಾಗಿರುವಂತಹ ಹಾಗೂ ರಾಜ್ಯದಲ್ಲಿನ ಇತರೆ ಭಾಗಗಳಲ್ಲಿಯೂ ದೊರತಿರುವಂತಹ ಶಾಸನಗಳನ್ನು ಬಹುಸೂಕ್ಷ್ಮವಾಗಿ ಗ್ರಹಿಸಿದಾಗ; ಆ ಶಾಸನಗಳ ವಸ್ತುವಿಷಯವು ಪ್ರಧಾನವಾಗಿ 4 ಭಾಗಗಳಾಗಿ ವಿಭಾಗಿಸಿ ಬರೆಸಲಾಗಿರುತ್ತದೆ. ಅಂದರೆ ಇಷ್ಟಾರ್ಥ ದೇವತಾ ಪ್ರಾರ್ಥನೆ ಎಂಬುದಾಗಿ ಉದಾ: ವೈಷ್ಣವ ಪಂಥದ ಶಾಸನಗಳಲ್ಲಿ ಶ್ರೀಸ್ವಸ್ತಿಶ್ರೀ ನಮಸ್ಸೀದ್ಯೇಭ್ಯಃ, ಶುಭಮಸ್ತು ಶ್ರೀಮತೇರಾಮಾನುಜಾಚಾಯನಮಃ ಇನ್ನೂ ಮೊದಲಾದಂತಹ ಶ್ಲೋಕಗಳು ಅಡಕಗೊಂಡಿರುತ್ತವೆ. ಮತ್ತೆ ಕೆಲವು ಶಾಸನಗಳಲ್ಲಿ ಈ ಶ್ಲೋಕಗಳು ಇಲ್ಲದಿರುವುದನ್ನು ಕೂಡ ಗುರುತಿಸಬಹುದು. ಶಾಸನದ ಎರಡನೇ ಭಾಗವು ಶಾಸನವನ್ನು ಬರೆದ ಕಾಲಮಾನ, ಆಳುತ್ತಿದ್ದಂತಹ ರಾಜಪ್ರಮುಖ ವ್ಯಕ್ತಿ, ಸಾಮಂತ ಮಹಾಪ್ರಧಾನ ದಂಡನಾಯಕ, ರಾಜಗುರು, ಪ್ರಮುಖ ವ್ಯಕ್ತಿ, ಸಾಮಂತ, ಮಹಾಪ್ರಧಾನ ದಂಡನಾಯಕ, ರಾಜಗುರು ಸಂಬಂಧಿಸಿದವರ ವಂಶಾವಳಿ, ಆತನಿಗೆ ಬಂದಿರುವ ಬಿರುದುಗಳನ್ನು ಜಯಿಸಿರುವ ಯುದ್ಧಗಳು ರಾಜಮುದ್ರಿಕೆ, ನಾಣ್ಯಗಳು, ಗಡಿರೇಖೆಗಳನ್ನು ಒಳಗೊಂಡಿರುತ್ತದೆ. ಮೂರನೇ ಭಾಗದಲ್ಲಿ ಶಾಸನವನ್ನು ರಚಿಸಿರುವ ಅಥವಾ ಕೆತ್ತಿಸಿರುವಂತಹ ಮಹತ್ವದ ಉದ್ದೇಶವು ಅದರ ವಿವರಗಳ ಸಹಿತವಾಗಿ ಸ್ಪಷ್ಟವಾಗಿಯೇ ನಿರೂಪಿತವಾಗಿರುತ್ತದೆ. ಶಾಸನದ ಅಂತಿಮ ಹಾಗೂ ನಾಲ್ಕನೇ ಭಾಗದಲ್ಲಿ ಶಾಸನೋಕ್ತವಾದ ಧರ್ಮ ಮತ್ತು ಪಂಥದ ರಕ್ಷಣೆಗೆ ಸಾಧಕವಾದ ಶ್ಲೋಕಗಳೂ, ಮಾತುಗಳೂ ರಚಿತಗೊಂಡಿರುತ್ತವೆ ಎಂದು ಹೇಳಬಹುದು. ಪ್ರಸ್ತುತ ಹಾಸನ ಜಿಲ್ಲೆಯ ಚರಿತ್ರೆ ಹಾಗೂ ಅಲ್ಲಿನ ವೈಷ್ಣವ ಪಂಥದವರ ಬಗೆಗೆ ಅಧ್ಯಯನ ಮಾಡಲು ಈ ಶಾಸನಗಳು ಹೆಚ್ಚಿನ ಅವಶ್ಯಕ ಆಕರಗಳೇ ಆಗಿ ಹೊರಹೊಮ್ಮಿರುತ್ತವೆ ಎಂಬುದನ್ನು ಗುರುತಿಸಲಾಗಿದೆ.

ಪ್ರಸ್ತುತ ಕೈಗೊಂಡಿರುವ ಅಧ್ಯಯನಕ್ಕೆ ಸಂಬಂಧಿಸಿದಂತೆ ದೊರಕಿರುವ ಈ ಶಾಸನಗಳಿಂದ ಹೆಚ್ಚಿನ ರೀತಿಯಲ್ಲಿ ಉಪಯುಕ್ತ ಅಮೂಲ್ಯವಾದಂತಹ ಮಾಹಿತಿಯನ್ನು ದಾಖಲೀಕರಿಸಿ ಒಂದು ಪಟ್ಟಿಯನ್ನು ತಯಾರಿಸಲಾಗಿರುತ್ತದೆ. ಹಾಗೆಯೇ ಪ್ರಧಾನವಾಗಿ, ಹಾಸನ ಜಿಲ್ಲೆಯ ಅದೇ ತಾಲ್ಲೂಕಿನ ದೊಡ್ಡಗದ್ದವಳ್ಳಿ ಗ್ರಾಮದಲ್ಲಿನ ಶ್ರೀಲಕ್ಷ್ಮೀದೇವಿಯ ದೇವಸ್ಥಾನದಲ್ಲಿ ಸರಿಸುಮಾರು ಕ್ರಿ.ಶ.1113ರ ಶಾಸನ ಸಂಖ್ಯೆ 36 ದೊರಕಿರುತ್ತದೆ. ಈ ಶಾಸನವನ್ನು ಗಮನಿಸಿದಾಗ; ಹೊಯ್ಸಳರ ಪ್ರಖ್ಯಾತ ದೊರೆ ವಿಷ್ಣುವರ್ಧನನ ಆಡಳಿತದ ಅವಧಿಯಲ್ಲಿ ರಚಿಸಲಾಗಿದೆ ಎಂದು ಗುರುತಿಸಲಾಗಿರುತ್ತದೆ. ದೊರೆ ವಿಷ್ಣುವರ್ಧನನು ತನ್ನ ಕಾಲದಲ್ಲಿದ್ದಂತಹ ಮಹಾವಡ್ಡ ವ್ಯವಹಾರಿ ಕುಲ್ಲಹಣ ರಾಹುತ ಮತ್ತು ಆತನ ಧರ್ಮಪತ್ನಿ ಆಗಿದ್ದಂತಹ ಸಹಜಾದೇವಿಗಾಗಿ ಅಭಿನವ ಕೊಲ್ಲಾಪುರ ಅಂದರೆ, ಗದ್ದವಳ್ಳಿ ಎಂಬ ಸ್ಥಳದಲ್ಲಿ ನೂತನವಾಗಿ ಒಂದು ಪುರವನ್ನು ನಿರ್ಮಾಣ ಮಾಡಿ, ಅಲ್ಲಿ ಮಹಾಲಕ್ಷ್ಮೀದೇವಿಯ ದೇವಾಲಯವೊಂದನ್ನು ಕಟ್ಟಿಸಿದನು ಎಂಬುದು ಇಲ್ಲಿನ ಶಾಸನದಿಂದ ತಿಳಿದುಬರುತ್ತದೆ. ಹಾಗೆಯೇ

ಇದೇ ಶಾಸನದಲ್ಲಿ ಕುಲ್ಲಹಣ ರಾಹುತನ ವಾದ್ಯದೇಶೋಧದನೆಂದು ಮತ್ತು ಆತನು ರುಹಿತ ಕುಲಕ್ಕೆ ಸೇರಿದವನು ಎಂದೂ ಕೂಡ ವರ್ಣಿಸಲಾಗಿದೆ. ಮತ್ತೇ ಈ ದೇವಾಲಯವನ್ನು ನಿರ್ಮಿಸಿದಂತಹ ವಾಸ್ತುಶಿಲ್ಪಿ ಮಲ್ಲೋಜ ಮಣಿಯೋಜ ಎಂಬುವನು ಎಂದೂ ಕೂಡ ದಾಖಲಾಗಿರುತ್ತದೆ.

ಇದೇ ಜಿಲ್ಲೆಯ ಮತ್ತು ತಾಲೂಕಿನ ಪರಿಧಿಯಲ್ಲಿ ಬರುವಂತಹ ಕೆಲ್ಲವತ್ತಿ ಎಂಬ ಗ್ರಾಮದಲ್ಲಿನ ತಿರುಮಲ ದೇವರ ಗುಡಿಯಲ್ಲಿರುವ ಸರಿಸುಮಾರು ಕ್ರಿ.ಶ.1123ರ 76ನೇ ಶಾಸನವು ಹೊಯ್ಸಳರ ಪ್ರಖ್ಯಾತ ಅರಸನಾಗಿದ್ದಂತಹ ವಿಷ್ಣುವರ್ಧನನ ತಮ್ಮನಾಗಿದ್ದಂತಹ ಉದಯಾದಿತ್ಯನು ಈ ಕೆಲ್ಲವತ್ತಿ ಗ್ರಾಮದಲ್ಲಿ ಮರಣ ಹೊಂದಿದ್ದನು ಎಂಬಂತಹ ವಿಚಾರವನ್ನು ಸ್ಪಷ್ಟವಾಗಿಯೇ ದಾಖಲಿಸಿರುತ್ತದೆ. ಮತ್ತೆ ಶಾಸನದಲ್ಲಿ ಮುಂದುವರೆದಂತೆ, ನಿರ್ಗುಂದ ನಾಡಿಗೆ ಸೇರಿದಂತಹ ಈ ಕೆಲ್ಲವತ್ತಿ ಎಂಬ ಗ್ರಾಮವನ್ನು ಒಂದು ಅಗ್ರಹಾರವಾಗಿಯೇ ಮಾರ್ಪಡಿಸಿದನು.ಅನಂತರ ಇದನ್ನು 18 ವೃತ್ತಿಗಳಾಗಿ ವಿಭಜಿಸಿ ಅದರಲ್ಲಿ ಒಂದು ಪಾಲನ್ನು ಮಾತ್ರ ದಾನವಾಗಿಯೇ ನೀಡಿರುವ ಬಗೆಗೆ ದಾಖಲಾಗಿದೆ.ಈ ತೆರನಾಗಿ ದಾನವನ್ನು ಪಡೆದುಕೊಂಡಿರುವಂತಹ ಬ್ರಾಹ್ಮಣರು ಉದಯಾದಿತ್ಯ ಯುವರಾಜನ ಆಶ್ರಯದಾತರಾಗಿದ್ದ ಇದರ ಜೊತೆಗೆಯೇ ಈಗಾಗಲೇ ನೀಡಲಾಗಿರುವಂತಹ 18 ವೃತ್ತಿಗಳಲ್ಲಿ ಎರಡು ವೃತ್ತಿಗಳನ್ನು ಉದಯಾದಿತ್ಯನು ನಿರ್ಮಾಣ ಮಾಡಿಸಿದ್ದ. ಇವುಗಳು  ಜನಾರ್ಧನ ದೇವಾಲಯಕ್ಕೆ ಸೇರಿದ್ದವೇ ಆಗಿದ್ದವು. ಈ ಶಾಸನದಲ್ಲಿ ಕಂಡುಬರುವಂತಹ ಮತ್ತೊಂದು ಅಂಶವೆಂದರೆ, ಅದುವೇ ಉಯ್ಯಾಕೊಂಡ ಉತ್ಸವ ಮೂರ್ತಿ ದೇವರ ಲೋಹದ ಪ್ರತಿಮೆಗೆ ಮಾಡಿರುವ ನೈವೇದ್ಯವನ್ನು ಸವಿಸ್ತಾರವಾಗಿಯೇ ತಿಳಿಸಿರುವುದೇ ಆಗಿರುತ್ತದೆ. ಬ್ರಾಹ್ಮಣರಿಗೆ ದಾನ ನೀಡಿರುವ ನಾಲ್ಕು ತೋಟಗಳ ಬಗೆಗೆ ವಿಷಯವನ್ನು ಕೂಡ ಇದರಲ್ಲಿ ಪ್ರಸ್ತಾಪಿಸಲಾಗಿದೆ. ಈ ತೋಟಗಳನ್ನು ಹಿರಿಯ ಹೂವಿನ ತೋಟ, ಅದಕ್ಕೆ ತೋರಣಶೂರ ಎಂದೂ, ಮಹಾದೇವ ದೇಗುಲದ ಬಡಗಣ ಸೀಮೆಯ ಅರಟ್ಟಮಿಕೆ ತೋಟ ಎಂದೂ ಹಡುವಣ ಹಲಸಿನ (ಮೀ) ಉಳಿಯಮಾವಿನ ಹಿರಿಯಮಾವಿನ ತೋಟ ಎಂದೂ ಈ ತೋಟದಿಂದ ಪೂರ್ವ ದಿಕ್ಕಿಗೆ ಇರುವಂತಹ ಯಾಂಡಿಯಾಕಾರ್ ಕೊಟ್ಟ ತೋಟಗಳನ್ನು ದಾನವಾಗಿಯೇ ನೀಡಿದರು ಎಂಬುದು ಇದರಿಂದ ತಿಳಿದುಬರುತ್ತರೆ.

ಒಟ್ಟಾರೆಯಾಗಿ, ಒಂದು ನಿರ್ದಿಷ್ಟವಾದಂತಹ ಪ್ರಮಾಣದಲ್ಲಿ ನೈವೇದ್ಯಕ್ಕೆ ಅಕ್ಕಿ ಹಾಗೂ ನಿರ್ದಿಷ್ಟಪಡಿಸಿದ ಹಣವನ್ನು ಅರ್ಚಕರು, ಪರಿಚಾರಕರು ಹಾಗೂ ತೋಟದಲ್ಲಿ ಕಾರ್ಯನಿರ್ವಹಿಸುವವರಿಗೆ ನೀಡಬೇಕೆಂಬ ನೀತಿ–ನಿಬಂಧನೆಯನ್ನು ಕೂಡ ಇದರಲ್ಲಿ ವಿಧಿಸಲಾಗಿರುತ್ತದೆ. ಇಲ್ಲಿ ಬಹುಸೂಕ್ಷ್ಮ ಪ್ರಜ್ಞೆಯಿಂದಲೇ ಗಮನಿಸಬೇಕಾದಂತಹ ಪ್ರಮುಖ ಅಂಶವೆಂದರೆ; ಇಲ್ಲಿ ನಿಗದಿಪಡಿಸಿದಷ್ಟೇ ಅಕ್ಕಿ ಹಾಗೂ ಹಣವನ್ನು ಏನಾದರೂ ಕೊಡಲಾಗದಿದ್ದರೆ, ಅಂದರೆ; ಅತ್ಯುತ್ತಮ ಮಳೆಯಾಗಿ ಉತ್ತಮ ರೀತಿಯಲ್ಲಿ ಬೆಳೆಯನ್ನು ಬೆಳೆದರೆ ಅಥವಾ ಅನಾವೃಷ್ಟಿಯಿಂದ ಅಲ್ಪಸ್ವಲ್ಪ

ಬೆಳೆಯನ್ನು ಬೆಳೆದರೆ, ಅದಕ್ಕೆ ಅನುಗುಣವಾಗಿಯೇ ದೇವತೆಗಳಿಗೆ ದೇವಾಲಯದಲ್ಲಿ ನೈವೇದ್ಯವನ್ನು ಸಲಿಸಬೇಕಾಗಿತ್ತು ಎಂಬುದು ಇದರಿಂದ ತಿಳಿದುಬರುತ್ತದೆ.

ಹಾಸನ ಜಿಲ್ಲೆಯ ಮತ್ತು ಇದೇ ತಾಲ್ಲೂಕಿನ ಹಲವು ಗ್ರಾಮಗಳಲ್ಲಿ ಒಂದಾಗಿರುವ ಹೊನ್ನಾವರದಲ್ಲಿರುವಂತಹ ಕೇಶವ ದೇವಾಲಯದಲ್ಲಿ ಸರಿಸುಮಾರು ಕ್ರಿ.ಶ.1149ನೇ ಇಸವಿಯ 95ನೇ ಸಂಖ್ಯೆಯ ಶಾಸನವೊಂದು ದೊರೆತಿರುತ್ತದೆ. ಈ ಶಾಸನವನ್ನು ಬಹುಸೂಕ್ಷ್ಮವಾಗಿ ಗ್ರಹಿಸಿದಾಗ; ಶಾಸನದಲ್ಲಿ ಪ್ರಧಾನವಾಗಿ ಎರಡು ಭಾಗಗಳು ಇರುವುದು ಕಂಡುಬರುತ್ತದೆ. ಅದರ ಪ್ರಥಮ ಭಾಗವು (1 ರಿಂದ 37) ಹೊಯ್ಸಳರ ಹೆಸರಾಂತ ಅರಸರಾಗಿದ್ದ ದ್ವಾರಸಮುದ್ರದ ವಿಷ್ಣುವರ್ಧನನಿಗೂ ಹಾಗೂ ದ್ವಿತೀಯ ಭಾಗವು ಕೋಣೆಯ ಶಂಕರದಂಡನಾಥ ಎಂಬುವನಿಗೂ ಸಂಬಂಧಿಸಿದ್ದಕ್ಕೆ ಆಗಿರುತ್ತದೆ. ಈತನು ಹಾಸನ ಪ್ರದೇಶದಲ್ಲಿನ ವಿವಿಧ ಸರಿಸುಮಾರು ಒಂಭತ್ತು ಸ್ಥಳಗಳಲ್ಲಿ ವಿಷ್ಣು ಮತ್ತು ಹರಿಯ ದೇವಾಲಯಗಳನ್ನು ನಿರ್ಮಾಣ ಮಾಡಿದ್ದನು ಎಂಬುದು ಇದರಲ್ಲಿ ದಾಖಲೀಕರಣಗೊಂಡಿರುತ್ತದೆ. ಹಾಗಾಗಿ ಈತನೇ ಈ ಹೊನ್ನಾವರ ಗ್ರಾಮದಲ್ಲಿನ ಅಗ್ರಹಾರದಲ್ಲಿ 1149ನೇ ಇಸವಿಯಲ್ಲಿ ಕೇಶವ ದೇವಾಲಯವನ್ನು ಕೂಡ ನಿರ್ಮಾಣ ಮಾಡಿಸಿದ್ದನು ಎಂದು ಹೇಳಲಾಗಿರುತ್ತದೆ ಮತ್ತೇ ಕೆಲವು ವರ್ಷಗಳ ಅನಂತರದಲ್ಲಿ ನಾಗದೇವ ನಾಯಕ, ಈತನ ಮಗ, ಮಹಾಪ್ರಧಾನ ಹೆಗ್ಗಡೆ ಲಕುಮಯ್ಯನು ಒಂದನೇ ನರಸಿಂಹನಿಂದ ಭೂಮಿಯನ್ನು ದಾನವಾಗಿಯೇ ಪಡೆದಿರುವುದು ಹಾಗೂ ಅದಕ್ಕೆ ಪ್ರತಿಯಾಗಿ ಆ ಭೂ ಕಾಣಿಕೆಯನ್ನು ಕೇಶವ ದೇವರಿಗೆ, ಆ ದೇವಾಲಯದಲ್ಲಿನ ಪರಿಚಾರಿಕನಾಗಿದ್ದಂತಹ ಮೊಳ್ಳೆಯನಿಗೆ ಹಾಗೂ ಶಂಕರ ಎಂಬ ದಂಡನಾಯಕನ ಮಗನಾದಂತ ಬೋಕಣನಿಗೆ ದಾನವನ್ನು ನೀಡಿರುವ ಬಗೆಗೆ ಉಲ್ಲೇಖಿತ ವಿವರವು ಇದರಿಂದಲೇ ಲಭ್ಯವಾಗಿರುತ್ತದೆ. ಬಹುಮುಖ್ಯವಾಗಿ ಇದು ವೈಷ್ಣವ ಪಂಥವನ್ನು ಪ್ರತಿಪಾದಿಸಿರುವುದೇ ಆಗಿರುತ್ತದೆ.

ಮುಂದುವರೆದು ದಾಖಲಿಸುವುದಾದರೆ; ಇದೇ ಹೊನ್ನಾವರ ಗ್ರಾಮದಲ್ಲಿನ ಕೇಶವ ದೇವಾಲಯದಲ್ಲಿ ಸರಿಸುಮಾರು ಕ್ರಿ.ಶ.1173ನೇ ಇಸವಿಯ 96ನೇ ಸಂಖ್ಯೆಯ ಶಾಸನವೊಂದು ಲಭ್ಯವಾಗಿರುತ್ತದೆ. ಈ ಶಾಸನವನ್ನು ತಲಸ್ಪರ್ಶಿಯಾಗಿ ಅಧ್ಯಯನ ಮಾಡಿದಾಗ, ಇದು ಇಮ್ಮಡಿ ಬಲ್ಲಾಳನ ಆಡಳಿತದಲ್ಲಿ 1173ನೇ ಇಸವಿಯಲ್ಲಿ ರಚಿತಗೊಂಡಿದೆ ಎಂಬುದು ತಿಳಿದುಬರುತ್ತದೆ. ಈ ಶಾಸನದಲ್ಲಿ ಬಹುಮುಖ್ಯವಾಗಿರುವ ಅಂಶಗಳೆಂದರೆ; ಮಹಾಪ್ರಧಾನ, ಸರ್ವಾಧಿಕಾರಿ ಹೆಗ್ಗಡೆ ಲಕ್ಕಯ್ಯನು ಹೊನ್ನಾವರ ಗ್ರಾಮದಲ್ಲಿ ಕೇಶವ ದೇವರಿಗೆ ಪೂವಿಂದಾವೆಯ ಅಸಗಟ್ಟದ ಕೆರೆಯ ಕೆಳಗೆ ಇರುವಂತಹ ಭೂಮಿಯನ್ನು ದಾನವಾಗಿ ಬಿಟ್ಟುಕೊಟ್ಟಿರುವಂತಹ ಬಗೆಗೆ ಉಲ್ಲೇಖಿತಗೊಂಡಿರುತ್ತದೆ. ಮತ್ತೆ ಈ ಶಾಸನದಲ್ಲಿ ದಾಖಲೀಕರಣಗೊಂಡಿರುವ 'ಕೇಶವ ದೇವರು' ಎಂಬ ಹೆಸರನ್ನು ಮಹಾವಿಷ್ಣುವಿಗೆ ಕರೆಯುವ ಮತ್ತೊಂದು ಹೆಸರಾಗಿದೆ. ಇದು ಕೂಡ ವೈಷ್ಣವ ಪಂಥದವರು ಅನುಸರಿಸುವ ಹಾಗೂ ಅದನ್ನು ಆಚರಣೆ ಮಾಡುವ ದೇವತೆಯಾಗಿದೆ ಎಂಬುದನ್ನು ಗುರುತಿಸಲಾಗಿದೆ.

ಹಾಸನ ಜಿಲ್ಲೆ ಇದೇ ತಾಲೂಕಿನ ಕೋರಮಂಗಲ ಎಂಬ ಗ್ರಾಮದಲ್ಲಿ ಸರಿಸುಮಾರು ಕ್ರಿ.ಶ.1160ನೇ ಇಸವಿಯ ಗೋವಿಂದೇಶ್ವರ ದೇವಸ್ಥಾನದಲ್ಲಿ 129ನೇ ಸಂಖ್ಯೆಯ ಶಾಸನವೊಂದು ಲಭ್ಯವಾಗಿರುತ್ತದೆ. ಈ ಶಾಸನವನ್ನು ತಳಸ್ಪರ್ಶಿಯಾಗಿ ಅಧ್ಯಯನ ಮಾಡಿದಾಗ, ಇದನ್ನು ಹೊಯ್ಸಳರ ಅರಸ ಒಂದನೆಯ ನರಸಿಂಹನ ಆಡಳಿತದ ಕಾಲದಲ್ಲಿ ಮತ್ತು ಇಮ್ಮಡಿ ಬಲ್ಲಾಳನ ಆಡಳಿತದಲ್ಲಿ ಅಧಿಕಾರಿಯಾಗಿದ್ದಂತಹ ಗೋವಿಂದ ಎಂಬುವನ ವಂಶಾವಳಿಯ ಜೊತೆಗೆಯೇ ಸೀಗೇನಾಡಿಗೆ ಸೇರಿದಂತಹ ಈ ಕೋರಮಂಗಲ ಗ್ರಾಮದಲ್ಲಿರುವ ಗೋವಿಂದೇಶ್ವರ ದೇವಾಲಯವನ್ನು ಕಟ್ಟಿಸಿ, ಈ ದೇವರನ್ನು ಪ್ರತಿಷ್ಠಾಪಿಸಿರುವ ಬಗೆಗೆ ಉಲ್ಲೇಖವಿರುತ್ತದೆ. **ವೈಷ್ಣವ ಪಂಥದವರು ಮಹಾವಿಷ್ಣು ಅಥವಾ ಕೃಷ್ಣನನ್ನು ಗೋವಿಂದ ಅಥವಾ ವಾಸುದೇವ** ಎಂದೂ ಕರೆಯುವುದು ವಾಡಿಕೆಯಾಗಿದೆ. ಆದ್ದರಿಂದಲೇ ಇವರ ಕಾಲದಲ್ಲಿಯೂ ಕೂಡ ಮಹಾವಿಷ್ಣುವನ್ನು ಆರಾಧಿಸುವ ವೈಷ್ಣವ ಪಂಥಕ್ಕೆ ಪ್ರೋತ್ಸಾಹವು ಹೆಚ್ಚಿನ ರೀತಿಯಲ್ಲಿಯೇ ದೊರೆತಿರುವುದು ಕಂಡುಬಂದಿರುತ್ತದೆ.

ಹಾಸನ ಜಿಲ್ಲೆಯ ಹೊಳೆನರಸೀಪುರ ತಾಲೂಕಿನ ಪರಿಧಿಯಲ್ಲಿ ಬರುವ ತೇವಡಹಳ್ಳಿ ಎಂಬ ಗ್ರಾಮದಲ್ಲಿ ಸರಿಸುಮಾರು ಕ್ರಿ.ಶ.16ನೇ ಶತಮಾನದ 110ನೇ ಸಂಖ್ಯೆಯ ಶಾಸನವೊಂದು ಲಭ್ಯವಾಗಿರುತ್ತದೆ. ಈ ಶಾಸನವು ಕ್ರಿ.ಶ.16ನೇ ಶತಮಾನದಲ್ಲಿ ಚಾಲ್ತಿಯಲ್ಲಿದ್ದಂತಹ ಲಿಪಿಯ ಲಕ್ಷಣಗಳನ್ನು ಹೊಂದಿರುತ್ತದೆ. ಹಾಗೆಯೇ, ಕೃಷ್ಣರಾಯರ ಭುಜಪ್ರತಾಪನೆಂದು ವರ್ಣಿತನಾಗಿದ್ದಂತಹ ಮಲ್ಲರಸ ಎಂಬುವನು ಬೆಟ್ಟದ ತಿರುಮಲ ದೇವರಿಗೆ ದಾನವನ್ನು ನೀಡಿರುವ ಬಗೆಗೆ, ಇದರಲ್ಲಿ ಉಲ್ಲೇಖಗಳು ದೊರಕಿರುತ್ತವೆ. ಅಂದರೆ, ತಿರುಮಲದೇವರು ಎಂಬ ಹೆಸರು ಕೂಡ ವೈಷ್ಣವ ಪಂಥದಲ್ಲಿನ ಮಹಾವಿಷ್ಣುವಿನ ನಾಮಾಂಕಿತವೇ ಆಗಿರುತ್ತದೆ ಎಂಬುದನ್ನು ಗುರುತಿಸಲಾಗಿದೆ. ಇದನ್ನು ಕ್ಷೇತ್ರಾಧ್ಯಯನದಿಂದಲೂ ಕೂಡ ಪ್ರತ್ಯಕ್ಷದರ್ಶಿಯಾಗಿಯೇ ಮಾಹಿತಿಯನ್ನು ಪಡೆಯಲಾಗಿರುತ್ತದೆ.

ಹಾಸನ ಜಿಲ್ಲೆಯ ಇದೇ ತಾಲೂಕಿನಲ್ಲಿ ಬರುವಂತಹ ಗ್ರಾಮಗಳಲ್ಲಿ ಒಂದಾಗಿರುವ ಸಾವಂತಹಳ್ಳಿಯಲ್ಲಿ ದೊರೆತಿರುವ 172ನೇ ಸಂಖ್ಯೆಯ ಶಾಸನವು ಸರಿಸುಮಾರು ಕ್ರಿ.ಶ.1644ನೇ ಇಸವಿಯದ್ದು ಎಂದು ಗುರುತಿಸಲಾಗಿದೆ. ಮತ್ತೆ ಈ ಶಾಸನದಲ್ಲಿನ ಬಹುಮುಖ್ಯ ಅಂಶವೆಂದರೆ; ಇದು ಮೈಸೂರು ಒಡೆಯರ ಆಳ್ವಿಕೆಯ ಕಾಲದಲ್ಲಿ ರಚಿತಗೊಂಡಿರುತ್ತದೆ ಎಂಬುದು ವಿಶೇಷವೇ ಆಗಿದೆ. ಈ ಸಂದರ್ಭದಲ್ಲಿ ದೇವರಾಜ ಒಡೆಯರ್ ಎಂಬುವರು ಮೇಲುಕೋಟೆಯಲ್ಲಿರುವ ಚೆಲುವನಾರಾಯಣಸ್ವಾಮಿ ದೇವರಿಗೆ ಗ್ರಾಮವೊಂದನ್ನು ದಾನವಾಗಿ ನೀಡಿರುವ ಬಗೆಗೆ ದಾಖಲೀಕರಣಗೊಂಡಿರುತ್ತದೆ. ಮತ್ತೇ ದಾನವನ್ನು ನೀಡಿರುವಂತಹ ಗ್ರಾಮವೇ ಇದೇ ಸಾವಂತಹಳ್ಳಿಯೇ ಆಗಿರಬಹುದು ಎಂದು ಊಹಿಸಲಾಗಿದೆ. ಕಂಠೀರವ ನರಸರಾಜರ ದತ್ತು ಪುತ್ರನಾಗಿರುವಂತಹ ಹಾಗೂ ಮೂಲತಃ ಕೆಂಪದೇವರಾಜ ಒಡೆಯರ್ ಎಂಬ ಹೆಸರಿಂದ ಕರೆಯಲ್ಪಟ್ಟಿರುವ ಮೈಸೂರು ಸಂಸ್ಥಾನದ ಅರಸರು ಪ್ರಸ್ತುತ ಶಾಸನದ ದಾನಿ ದೇವರಾಜ ಒಡೆಯರ್

ಎಂದು ಅಭಿನ್ನರಾಗಿದ್ದಂತಹ ಒಂದು ಪಕ್ಷದಲ್ಲಿ ಸಮೀಕರಿಸುವಂತಹ ವರ್ಷವೂ ಮಾತ್ರ ಆತನಿಗೆ ತೀರ ಮುಂಚಿನದೇ ಆಗಿರುತ್ತದೆ. ಈ ಶಾಸನವೂ ಕೂಡ ಬಹುಮುಖ್ಯವಾಗಿ ವೈಷ್ಣವ ಪಂಥವನ್ನು ಪ್ರತಿಪಾದಿಸಿರುವುದೇ ಆಗಿದೆಯೆಂದು ಅಧ್ಯಯನದಲ್ಲಿ ಗುರುತಿಸಲಾಗಿದೆ. ಏಕೆಂದರೆ, ಮಹಾವಿಷ್ಣುವಿನ ಆರಾಧನೆಯಲ್ಲಿ ಸ್ಥಳೀಯವಾಗಿ ಚೆಲುವನಾರಾಯಣ ಹಾಗೂ ರಂಗನಾಥ ಎಂದು ಕರೆಯುವುದು ಕೂಡ ವಾಡಿಕೆ ಇದೆ.

ಹಾಸನ ಜಿಲ್ಲೆಯ ಬೇಲೂರಿನ ತಾಲೂಕಿನ ಕೇಂದ್ರ ಸ್ಥಳದಲ್ಲಿಯೇ ಚನ್ನಕೇಶವ ದೇವಾಲಯದಲ್ಲಿ ಕ್ರಿ.ಶ.1117ನೇ ಮಾರ್ಚ್ 10ರಂದು ರಚಿತಗೊಂಡಿರುವ 16ನೇ ಸಂಖ್ಯೆಯ ಶಾಸನವೊಂದು ದೊರೆಕಿರುತ್ತದೆ. ಈ ಶಾಸನವು, ಇದು ಕನ್ನಡ ಮತ್ತು ಸಂಸ್ಕೃತ ಭಾಷೆಗಳ ಲಿಪಿಯನ್ನು ಹೊಂದಿರುತ್ತವೆ ಎಂಬುದನ್ನು ಗುರುತಿಸಲಾಗಿದೆ. ಪ್ರಮುಖವಾಗಿ ಈ ಶಾಸನವು ಹೊಯ್ಸಳರ ಅರಸ ವಿಷ್ಣುವರ್ಧನನ ಕಾಲದಲ್ಲಿ ರಚಿತವಾಗಿರುತ್ತದೆ ಎಂಬುದು ಉಲ್ಲೇಖಿತಗೊಂಡಿದೆ. ಮತ್ತೆ ಶಾಸನವು ಮುಂದುವರೆದಂತೆ; ದೊರೆಯು ಬೇಲೂರಿನಲ್ಲಿ ವಿಜಯನ್ ಆರಾಯಣದೇವ, ಚನ್ನಕೇಶವ ದೇವ ಹಾಗೂ ಲಕ್ಷ್ಮೀನಾರಾಯಣದೇವ ಎಂಬಂತಹ ಮೂರ್ತಿಗಳನ್ನು ಪ್ರತಿಷ್ಠಾಪಿಸಿದ್ದನು. ಈ ದೇವರುಗಳ ದಿನಂಪ್ರತಿಯ ಶ್ರೀಕಾರ್ಯಗಳಾಗಿ ದಾನವನ್ನು ಕುಡ ನೀಡಿದ್ದನು ಎಂಬುದು ಉಲ್ಲೇಖಿತವಾಗಿರುತ್ತದೆ. ಈ ಎಲ್ಲವುಗಳ ಜೊತೆಗೆ ಆ ಕಾಲದ ಪ್ರಮುಖ ಅರಸರಾಗಿದ್ದಾಂತಹ ವಿಷ್ಣುವರ್ಧನನ ಆಡಳಿತ ಮತ್ತು ಸಾಧನೆಗಳು ಕೂಡ ದಾಖಲೀಕರಣಗೊಂಡಿರುತ್ತವೆ. ಆದ್ದರಿಂದಲೂ ತಿಳಿದುಬರುವಂತಹ ಪ್ರಮುಖ ವಿಷಯವೆಂದರೆ; ಹೊಯ್ಸಳರ ಕಾಲದಲ್ಲಿ ಈ ಪ್ರದೇಶದಲ್ಲಿ ವೈಷ್ಣವ ಪಂಥಗಳ ಪ್ರೋತ್ಸಾಹದಾಯಕವಾಗಿಯೇ ದೇವಾಲಯಗಳು ನಿರ್ಮಾಣಗೊಂಡು ಕಾರ್ಯನಿರ್ವಹಿಸುವುದನ್ನು ಕ್ಷೇತ್ರಾಧ್ಯಯನದಿಂದ ಗುರುತಿಸಲಾಗಿದೆ.

ಹಾಸನ ಜಿಲ್ಲೆಯ ಬೇಲೂರು ತಾಲ್ಲೂಕು ಕೇಂದ್ರ ಪ್ರದೇಶದಲ್ಲಿ 168ನೇ ಸಂಖ್ಯೆಯ ತಾಮ್ರ ಶಾಸನವೊಂದು ದೊರೆತಿರುತ್ತದೆ. ಈ ಶಾಸನದಲ್ಲಿನ ಅಂಶಗಳನ್ನು ತಳಸ್ಪರ್ಶಿಯಾಗಿ ಗ್ರಹಿಸಿದಾಗ; ಬಹುಮುಖ್ಯವಾಗಿ ಈ ಶಾಸನವು ಹೊಯ್ಸಳರ ದೊರೆ ಎರಡನೇ ಬಲ್ಲಾಳನ ಆಡಳಿತ ಕಾಲದಲ್ಲಿ 1117ನೇ ಮಾರ್ಚ್ 19ರಂದು ರಚಿತಗೊಂಡಿರುತ್ತದೆ ಎಂಬುದಾಗಿ ದಾಖಲೀಕರಣಗೊಂಡಿರುತ್ತದೆ. ಹಾಗೆಯೇ ಇದೇ ಬಲ್ಲಾಳದೇವನು ಈ ಬೇಲೂರಿನಲ್ಲಿ ವಿಜಯನಾರಾಯಣ ದೇವಾಲಯವನ್ನು ನಿರ್ಮಾಣ ಮಾಡಿಸಿದನು. ಇದರ ಜೊತೆಗೆಯೇ ಬಾಳಂದ್ರ, ದೃಢಕವಾಡ, ದ್ವಾರಶಾಕಾಳ, ಬಾಣನು ಕೊಟ್ಟಾರ ಪ್ರಾಕಾರಾ ಗೋಡೆಗಳಂತವುಗಳನ್ನು ನಿರ್ಮಿಸಿರುವಂತಹ ವಿವರಗಳು ಈ ಶಾಸನದಲ್ಲಿರುವುದು ಕಂಡುಬರುತ್ತದೆ. ಹಾಗೆಯೇ ಈ ಹಿಂದೆ ದಾಖಲಿಸಿ, ಚರ್ಚಿಸಿರುವಂತೆಯೇ ಬೇಲೂರಿನಲ್ಲಿರುವ 16ನೇ ಸಂಖ್ಯೆಯ ಶಾಸನದಲ್ಲಿ ಮೂರು ದೇವಾಲಯಗಳನ್ನು ನಿರ್ಮಾಣ ಮಾಡಿರುವ ಬಗೆಗೆ ಸ್ಥೂಲವಾದಂತಹ ಮಾಹಿತಿಯ ಈ ಶಾಸನದಲ್ಲಿಯೂ ದಾಖಲಾಗಿರುವುದು ಕೂಡ ಕಂಡುಬರುತ್ತದೆ. ಇದೇ ಬೇಲೂರಿನ

ಹೆಸರಾಂತ ಚನ್ನಕೇಶವ ದೇವಾಲಯದಲ್ಲಿ ಲಭ್ಯವಾಗಿರುವ 17ನೇ ಸಂಖ್ಯೆಯ ಶಾಸನವೊಂದು ಕ್ರಿ.ಶ.1174ರಲ್ಲಿ ರಚಿತವಾಗಿರುತ್ತದೆ. ಇದು ಕನ್ನಡ ಭಾಷೆಯಲ್ಲಿಯೇ ಇರುತ್ತದೆ. ಇದು ಬಹುಮುಖ್ಯವಾಗಿ ವಿಷ್ಣುವರ್ಧನ ಪ್ರತಾಪ ಹೊಯ್ಸಳ ಬಲ್ಲಾಳದೇವ ಮತ್ತು ಆತನ ಮಹಾಪ್ರಧಾನವಾಗಿದ್ದಂತಹ ಮಾಚಿದೇವನು ಈ ಇಬ್ಬರೂ ಕೂಡ ಅಲ್ಲಿನ ವಿಜಯನಾರಾಯಣ ದೇವಾಲಯದಲ್ಲಿನ ದೇವರ ಕಾರ್ಯಗಳಿಗೆ ತೆರಿಗೆಯನ್ನು ಅರ್ಪಿಸಿರುವ ಬಗೆಗೆ ಉಲ್ಲೇಖಿತಗೊಂಡಿರುತ್ತದೆ ಎಂಬುದು ತಿಳಿದುಬರುತ್ತದೆ.

ಇದೇ ಬೇಲೂರು ಕೇಂದ್ರ ಪ್ರದೇಶದಲ್ಲಿ ಲಭ್ಯವಾಗಿರುವಂತಹ ಸರಿಸುಮಾರು ಕ್ರಿ.ಶ.1217ನೇ ಇಸವಿಯ 477ನೇ ಸಂಖ್ಯೆಯ ಇಬ್ಬೀಡಿನ ಶಾಸನವೊಂದು ಲಭ್ಯವಾಗಿರುತ್ತದೆ. ಈ ಶಾಸನವನ್ನು ಒಮ್ಮೆ ಸೂಕ್ಷ್ಮಗ್ರಹಿಯಾಗಿ ಅವಲೋಕಿಸಿದಾಗ; ಇದು ಎರಡನೆಯ ವೀರಬಲ್ಲಾಳ ಎಂಬುವನಿಗೆ ಸಂಬಂಧಿಸಿದ್ದೇ ಆಗಿರುತ್ತದೆ. ಹಾಗೆಯೇ ಇದರಲ್ಲಿ ಈ ಅರಸನನ್ನು 'ವೈಷ್ಣವ ಚಕ್ರವರ್ತಿ' ಎಂದು ಕೂಡ ಚಿತ್ರಿಸಲಾಗಿದೆ. ಆದ್ದರಿಂದಲೇ ಈತನ ರಾಜ್ಯಾಡಳಿತದ ಕಾಲದಲ್ಲಿ ಈ ಹಾಸನ ಜಿಲ್ಲೆಯ ಬಹುಭಾಗದಲ್ಲಿ ವೈಷ್ಣವ ಪಂಥದ ಬೆಳಣಿಗೆಗೆ ಹೆಚ್ಚು ಪೂರಕವಾಗಿರುವ ಪರಿಸರವೂ ಕೂಡ ನಿರ್ಮಾಣವಾಗಿತ್ತು ಎಂದೇ ಹೇಳಬಹುದು. ಇದು ಬೇಲೂರಿನಲ್ಲಿರುವಂತಹ ಪ್ರಸಿದ್ಧ ಚನ್ನಕೇಶವ ದೇವಾಲಯದಲ್ಲಿ 7ನೇ ಸಂಖ್ಯೆಯ ಶಾಸನವೊಂದು ಲಭ್ಯವಿರುತ್ತದೆ. ಈ ಶಾಸನವು ಬಹುಮುಖ್ಯ ಕ್ರಿ.ಶ.1273ರಲ್ಲಿ ರಚಿತವಾಗಿರುತ್ತದೆ. ಇದರಲ್ಲಿನ ಪ್ರಮುಖ ಅಂಶವೆಂದರೆ, ಶಂಕರಶೆಟ್ಟಿ ಎಂಬುವವರ ಮೊಮ್ಮಗನಾಗಿದ್ದ ಪುಟ್ಟಸ್ವಾಮಿ ಶಂಕರ ಎಂಬುವನು 2 ಗದ್ಯಾಣವನ್ನು ಪ್ರವಾಸಿ ಬ್ರಾಹ್ಮಣರಿಗೆ ದಾನವಾಗಿ ನೀಡಿರುವ ಬಗೆಗೆ ಉಲ್ಲೇಖಿತಗೊಂಡಿರುತ್ತದೆ. ಇದರ ನೇತೃತ್ವವನ್ನು ವೈಷ್ಣವ ಪಂಥದ ಮಹಾಜನರು ನಡೆಸಿಕೊಂಡು ಹೋಗಬೇಕು ಎಂಬಂತಹ ವಿವರವೂ ಕೂಡ ಇದರಲ್ಲಿ ದಾಖಲಾಗಿದೆ. ಹಾಗೆಯೇ ಇದೇ ದೇವಾಲಯದಲ್ಲಿ ದೊರಕಿರುವ 49ನೇ ಸಂಖ್ಯೆಯ ಶಾಸನವೊಂದು ಬಹುಮುಖ್ಯವಾಗಿ ಕ್ರಿ.ಶ.1297, ಕ್ರಿ.ಶ.1298 ಮತ್ತು ಕ್ರಿ.ಶ.1299 ಇಸವಿಗಳದ್ದೇ ಆಗಿರುತ್ತದೆ. ಹೀಗೆ, ಇದು ಈ ಮೂರು ಕಾಲಮಾನವನ್ನು ಒಳಗೊಂಡೇ ರೂಪಿತವಾಗಿರುತ್ತದೆ ಎಂಬುದು ತಿಳಿದುಬರುತ್ತದೆ. ಹಾಗೆಯೇ ಈ ಶಾಸನದಲ್ಲಿ ಹಣವನ್ನು ದಾನ ನೀಡಿದ ಉಲ್ಲೇಖವೂ ಇದೆ. ಮತ್ತೆ ಇಲ್ಲಿನ ದೇವರಾಗಿರುವಂತಹ ಕೇಶವನಾಥದಲ್ಲಿ ನಡೆಸುವ ಪಂಚಿಕೇಶ್ವರ ಐಂದ್ರ ಕೈಂಕಾರ್ಯಗಳಾಗಿ ಬೆಲುಹೊರ ಅಂದರೆ ಇಂದಿನ ಬೇಲೂರಿನ ಅಧಿಕಾರಿ ರಂಗಣ್ಣ ಎಂಬುವರು 170 ಗದ್ಯಾಣವನ್ನು ವೈಷ್ಣವ ಪಂಥದ ಮಹಾಜನರಿಗೆ ದಾನವನ್ನು ನೀಡಿರುವ ಬಗೆಗೆ ಉಲ್ಲೇಖಿತಗೊಂಡಿರುತ್ತದೆ. ಹಾಗೆಯೇ ಈ ಪಂಚಿಕೇಶ್ವರ ಐಂದ್ರದ ಕಾರ್ಯವನ್ನು ನಡೆಸುವ ದಿನಗಳಲ್ಲೆಲ್ಲ ಈ ದಾನ ನೀಡುವುದಾಗಿದ್ದು, ಅನಂತರ ಈ ಪ್ರದೇಶವನ್ನು ಆಡಳಿತ ಮಾಡಲು ಬಂದಿರುವ ಅಧಿಕಾರಿಗಳು ಈ ಕಾರ್ಯವನ್ನು ಮುಂದುವರೆಸಿರುತ್ತಾರೆ ಎಂಬುದು ಕೂಡ ತಿಳಿದುಬರುತ್ತದೆ.

ಹೀಗೆ, ಹಾಸನ ಜಿಲ್ಲೆಯಲ್ಲಿ ವೈಷ್ಣವ ಪಂಥದವರ ರಕ್ಷಣೆ ಹಾಗೂ ಅವರ ಅಭಿವೃದ್ಧಿಗಾಗಿ ಕಾಲಕಾಲಕ್ಕೆ ಆಡಳಿತಕ್ಕೆ ಬಂದಿರುವಂತಹ ರಾಜರು, ದೊರೆಗಳು, ಅರಸರು, ಮಹಾಪ್ರಧಾನರು ಹಾಗೂ ದಾನಿಗಳು ದಾನವನ್ನು ನೀಡುವ ಮುಖೇನ ರಕ್ಷಿಸಿಕೊಂಡೇ ಬಂದಿರುತ್ತಾರೆ ಎಂಬುದು ಈ ಶಾಸನ ಪಟಲಗಳಿಂದ ಸಾಬೀತುಗೊಂಡಿರುತ್ತದೆ ಎಂದೇ ಹೇಳಬಹುದು.

## ಗ್ರಂಥಸೂಚಿ


1. ಅನಂತ ರಂಗಾಚಾರ್.ಎನ್, ಕರ್ನಾಟಕದ ಶಾಸನಗಳು, ಡಿ.ವಿ.ಕೆ. ಮೂರ್ತಿ ಪ್ರಕಾಶನ, ಮೈಸೂರು, 1996
2. ಗೋಪಾಲ. ಬಾ.ರಾ. (ಸಂ) ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ – 3, ಹಾ.ಮಾ.ನಾಯಕ, ಮೊದಲ ಮಾತು, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು, 1974
3. ಗೋಪಾಲ ಬಾ.ರಾ. (ಸಂ), ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ – 8, ಶಾಸನ ಸಂಖ್ಯೆ 36 (V ಹಾಸನ – 49) ಕ್ರಿ.ಶ.1113, ದೊಡ್ಡಗದ್ದವಳ್ಳಿ
4. ಗೋಪಾಲ ಬಾ.ರಾ. (ಸಂ), ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ – 8,, ಶಾಸನ ಸಂಖ್ಯೆ – 95 (V – ಹಾಸನ 65 – 66) ಕ್ರಿ.ಶ. 1149, ಹೊನ್ನಾವರ
5. ಗೋಪಾಲ ಬಾ.ರಾ. (ಸಂ), ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ – 8, ಶಾಸನ ಸಂಖ್ಯೆ – 96 (V – ಹಾಸನ 67) ಕ್ರಿ.ಶ. 1173, ಹೊನ್ನಾವರ
6. ಗೋಪಾಲ ಬಾ.ರಾ. (ಸಂ), ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ – 8, ಶಾಸನ ಸಂಖ್ಯೆ – 129 (V – ಹಾಸನ 72) ಕ್ರಿ.ಶ. 1160, ಕೋರಮಂಗಲ
7. ಗೋಪಾಲ ಬಾ.ರಾ. (ಸಂ), ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ – 8, ಶಾಸನ ಸಂಖ್ಯೆ – 110 (V – ಹೊಳೆನರಸೀಪುರ 8) ಕ್ರಿ.ಶ. 16ನೇ ಶತಮಾನ, ತೇವಡಹಳ್ಳಿ
8. ಗೋಪಾಲ. ಬಾ.ರಾ. (ಸಂ), ಎಫಿಗ್ರಾಫಿಯಾ ಕರ್ನಾಟಿಕ, ಸಂಪುಟ – 8, ಶಾಸನ ಸಂಖ್ಯೆ – 172 (V – ಹಾಸನ–120) ಕ್ರಿ.ಶ. 1644, ಸಾವಂತಹಳ್ಳಿ
9. ಗೋಪಾಲ್.ಬಾ.ರಾ, ಎಸ್.ಎಸ್.ಜಾಗೀರ್‌ದಾರ್ (ಸಂ) ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, ಶಾಸನ ಸಂಖ್ಯೆ – 16 (V – ಬೇಲೂರು–58), ಬೇಲೂರು
10. ಗೋಪಾಲ್.ಬಾ.ರಾ, ಎಸ್.ಎಸ್.ಜಾಗೀರ್‌ದಾರ್ (ಸಂ) ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, ಶಾಸನ ಸಂಖ್ಯೆ – 168 (V– ಬೇಲೂರು – 71–72) ಕ್ರಿ.ಶ.1174, ಬೇಲೂರು

11. ಗೋಪಾಲ್.ಬಾ.ರಾ, ಎಸ್.ಎಸ್.ಜಾಗೀರ್‌ದಾರ್ (ಸಂ) ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, ಶಾಸನ ಸಂಖ್ಯೆ – 477 (V–ಬೇಲೂರು – 224) ಕ್ರಿ.ಶ. 1272, ಬೇಲೂರು

12. ಗೋಪಾಲ್.ಬಾ.ರಾ, ಎಸ್.ಎಸ್.ಜಾಗೀರ್‌ದಾರ್ (ಸಂ) ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, ಶಾಸನ ಸಂಖ್ಯೆ – 7 (XIV–ಬೇಲೂರು – 546) ಕ್ರಿ.ಶ. 1273, ಬೇಲೂರು

13. ಗೋಪಾಲ್.ಬಾ.ರಾ, ಎಸ್.ಎಸ್.ಜಾಗೀರ್‌ದಾರ್ (ಸಂ) ಎಫಿಗ್ರಾಫಿಯಾ ಕರ್ನಾಟಿಕ ಸಂಪುಟ–9, ಶಾಸನ ಸಂಖ್ಯೆ – 49 (XIV – ಬೇಲೂರು – 246) ಕ್ರಿ.ಶ. 1297, 1298 ಮತ್ತು 1299, ಬೇಲೂರು